ಕ್ರ.ಸಂ	ಶಿಕ್ಷಕರ ಹೆಸರು ಹಾಗೂ ಶಾಲೆಯ ಹೆಸರು	ವರ್ಗಾಯಿಸಿರುವ ಶಾಲೆಯ ಹೆಸರು
28.	ರಾಜಾನಾಯಕ ಸಹಿಪ್ರಾ ಶಾಲೆ, ಜೋಡಿಮಾಚೇನಹಳ್ಳಿ ಚಿಕ್ಕಮಗಳೂರು ತಾ.	ಸಕಿಪ್ರಾ ಶಾಲೆ ಗೋವಿಂದಪುರ ಚಿಕ್ಕಮಗಳೂರು ತಾ.
29.	ಬಿ.ಜಿ. ಕಲ್ಮರುಡಪ್ಪ ಸಹಿಪ್ರಾ ಶಾಲೆ, ಜಡಗನಹಳ್ಳಿ, ಚಿಕ್ಕಮಗಳೂರು ತಾ.	ಸಹಿಪ್ರಾ ಶಾಲೆ ಜೋಡಿಮಾಚೇನಹಳ್ಳಿ ಚಿಕ್ಕಮಗಳೂರು ತಾ.
30.	ಸೋಮಯ್ಯ ಸಹಿಪ್ರಾ ಶಾಲೆ, ಗೋವಿಂದಪುರ ಚಿಕ್ಕಮಗಳೂರು ತಾ.	ಸಕಿಪ್ರಾ ಶಾಲೆ, ಜಡಗನಹಳ್ಳಿ, ಚಿಕ್ಕಮಗಳೂರು ತಾ.

ಚಿಕ್ಕಮಗಳೂರು ಜಿಲ್ಲೆ ಐ.ಆರ್.ಡಿ.ಪಿ ಯೋಜನೆಯಲ್ಲಿ ಬ್ಯಾಂಕುಗಳಿಂದ ಸೌಲಭ್ಯ

4659 - ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1999-2000 ಮತ್ತು 2000-2001ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ವಿವಿಧ ಬ್ಯಾಂಕುಗಳಿಂದ ಬಡಜನರಿಗೆ ಐಆರ್‌ಡಿಪಿ ಯೋಜನೆಯಲ್ಲಿ ಸಾಲ ವಿತರಣೆ ಮಾಡಲಾಗಿದೆಯೇ? ಎಷ್ಟು ಜನರಿಗೆ ವಿತರಣೆ ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)*

ಆ) *ಬ್ಯಾಂಕುಗಳಿಗೆ ಬಿಡುಗಡೆ ಆಗಿರುವ ಸಹಾಯಧನದ ಮೊತ್ತ ಎಷ್ಟು ಈ ಸಾಲುಗಳಲ್ಲಿ ಖರ್ಚಾಗಿರುವ ಹಣ ಎಷ್ಟು?*

ಇ) *ಪ್ರಸ್ತುತ ವರ್ಷದಲ್ಲಿ ವಿತರಣೆ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)*

ಶ್ರೀ ಎಂ. ದಿವಾಕರ ಬಾಬು (ಗ್ರಾಮೀಮಾಭಿವೃದ್ಧಿ ಮತ್ತು ಪಂ.ರಾಜ್ ರಾಜ್ಯ ಸಚಿವರು) :

ಅ) 1-4-1999 ರಿಂದ ಐಆರ್‌ಡಿಪಿ ಯೋಜನೆಯು ಅಸ್ತಿತ್ವದಲ್ಲಿ ಇರುವುದಿಲ್ಲ. ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ, (ಐಆರ್‌ಡಿಪಿ), ಗ್ರಾಮೀಣ ಯುವಜನರಿಗೆ; ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮ (ಟ್ರೈಸಂ), ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ (ಡ್ವಾಕ್ರಾ), ಗ್ರಾಮೀಣ ಪ್ರದೇಶದಲ್ಲಿನ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣ ಸರಬರಾಜು ಯೋಜನೆ (ಸಿಟ್ರಾ) ಮತ್ತು ಗಂಗಾ ಕಲ್ಯಾಣ ಯೋಜನೆ (ಜಿಕೆವೈ) ಗಳನ್ನು ಪುನರ್ ರಚಿಸಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಯನ್ನು ಕೇಂದ್ರ ಸರ್ಕಾರ 1.4.99 ರಿಂದ ಜಾರಿಗೆ ತಂದಿದೆ. ಆದುದರಿಂದ ಐಆರ್‌ಡಿಪಿ ಯೋಜನೆಯಲ್ಲಿ ಸಾಲ ವಿತರಣೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಆರೋಗ್ಯ ಕೇಂದ್ರಗಳ ಅಭಿವೃದ್ಧಿ

4660 - ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಮತ್ತು ತಾಲ್ಲೂಕು ಆರೋಗ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯೋಚಿಸಿದೆಯೇ?

ಆ) ಈ ಯೋಜನೆಯನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು? ಈ ಯೋಜನೆಯ ಅಂದಾಜು ಮೊತ್ತ ಎಷ್ಟು?

ಇ) ಅಗತ್ಯ ಇರುವ ಹಣವನ್ನು ಯಾವ ಮೂಲಗಳಿಂದ ಪಡೆಯಲಾಗುವುದು?

ಡಾ. ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಯೋಜನೆಗಳು ಮುಂದುವರಿಯುವ ಕಾರ್ಯಕ್ರಮಗಳಾಗಿರುತ್ತವೆ. ವಿಶ್ವಬ್ಯಾಂಕ್ ನೆರವಿನ ಕೆಳಕಾಣಿಸಿದ ಮುಖ್ಯ ಯೋಜನೆಗಳು ಕಾರ್ಯಗತವಾಗುತ್ತಿವೆ.

1. ಕರ್ನಾಟಕ ಆರೋಗ್ಯ ವ್ಯವಸ್ಥೆಯ ಅಭಿವೃದ್ಧಿ ಯೋಜನೆ ಸಮುದಾಯ ಆರೋಗ್ಯ ಕೇಂದ್ರಗಳು ತಾಲ್ಲೂಕು ಆಸ್ಪತ್ರೆಗಳ ಅಭಿವೃದ್ಧಿಯನ್ನು ರೂ. 562.41 ಕೋಟಿ (ಜಿಲ್ಲಾ ಆಸ್ಪತ್ರೆಗಳು ಹಾಗೂ ಭೋದಕ ಆಸ್ಪತ್ರೆಗಳು).

2. ಭಾರತೀಯ ಜನಸಂಖ್ಯಾ ಯೋಜನೆ -VIII ರಡಿಯಲ್ಲಿ ಬೆಂಗಳೂರು ಪ್ರಾ.ಆ.ಕೆ.ಗಳು ಹಾಗೂ 11 ಇತರೆ ನಗರಗಳ ಒಟ್ಟು ಯೋಜನಾ ವೆಚ್ಚ ರೂ. 83.32 ಕೋಟಿಗಳು.

3. ಭಾರತೀಯ ಜನಸಂಖ್ಯಾ ಯೋಜನೆ-IX ರಡಿಯಲ್ಲಿ ಆರೋಗ್ಯ ಉಪಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಭಿವೃದ್ಧಿಯನ್ನು ರೂ. 150.84 ಕೋಟಿಗಳು ಅಂದಾಜು ವೆಚ್ಚದಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ.

ಇದರ ಜೊತೆಗೆ ಈ ಕೆಳಕಾಣಿಸಿದ ಯೋಜನೆಗಳನ್ನು ರಾಜ್ಯ ಆಯವ್ಯಯ ಅವಕಾಶದಡಿ ಕಾರ್ಯಕತಗೊಳಿಸಲಾಗುತ್ತಿದೆ.

1. 1000 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರಯೋಗಾಲಯಗಳಿಗೆ ರೂ. 50.00 ಲಕ್ಷ ಮೊತ್ತದಲ್ಲಿ ಸಲಕರಣೆಗಳನ್ನು ಮಂಜೂರು ಮಾಡಿದೆ.